ಕರೀದಿದ್ರೆ ಆಗೋ ಪರಿಣಾಮಕ್ಕೆ ನಮ್ಮನ್ನ ಅಂದುಕೋಬೇಡಿ. ನಮಗೂ ಏನು ಮಾಡ್ಬೇಕಂತ ಗೊತ್ತು' ಎನ್ನುತ್ತ ಕಾರ್ಯದರ್ಶಿ ಮತ್ತವನ ಸಂಗಡಿಗರು ಕಚೇರಿ ಬಿಟ್ಟು ಹೊರಟರು.

ಚೇರ್ಮನ್ರು ಕುರ್ಚಿಯಿಂದ ಎದ್ದು ನಿಂತು 'ಏನ್ ಮಾಡ್ತೀಯೋ ಮಾಡ್ಕಳಲೇ! ನಾನೂ ನೋಡ್ತೇನಿ' ಎಂದು ಒದರಾಡತೊಡಗಿದರು. ಬಂದವರು ಕಣ್ಮರೆಯಾದರೂ ಚೇರ್ಮನ್ನರ ಒದರಾಟ ಮುಂದುವರೆಯಿತು.

ಇದಾದ ಒಂದು ದಿನ ಸಂಜೆ ಕತ್ತಲು ಕವಿಯುತ್ತಿದ್ದ ಸಮಯ. ಮೇಷ್ಟ್ರ ಹೆಂಡತಿ ಅವಸರದಿಂದ ಶಂಕ್ರಪ್ಪನ ಮನೆಗೆ ಬಂದಳು. 'ಶಂಕ್ರಣ್ಣ! ಮೇಷ್ಟ್ರು ತಿರುಗಾಟಕ್ಕೆ ಅಂತ ಹೋದವ್ರು ಇನ್ನೂ ಮನೆಗೆ ಬಂದಿಲ್ಲ. ಎಂದೂ ಹೀಗೆ ಲೇಟಾಗಿ ಬಂದವ್ರೇ ಅಲ್ಲ' ಅಂದಳು ಗಾಬರಿಯಿಂದ. ಶಂಕ್ರಪ್ಪ 'ಎಲ್ಲಿ ಹೋಗ್ತಾರೆ ಬಿಡಮ್ಮ; ಬರ್ತಾರೆ, ಬಿಡು' ಅಂದ. ಎಂಟು ಗಂಟೆಯಾದರೂ ಮೇಷ್ಟ್ರ ಪತ್ತೆ ಇಲ್ಲ. ಯುವಕ ಸಂಘದ ನಾಲ್ಕು ಜನ ಮೇಷ್ಟ್ರನ್ನು ಹುಡುಕಲು ಹೊರಟರು. ಮೇಷ್ಟ್ರು ತಿರುಗಾಟಕ್ಕೆ ಹೋಗುತ್ತಿದ್ದ ಜಾಡುಗಳಿಗೆಲ್ಲ ಹೋಗಿ ಬಂದರು. ಮೇಷ್ಟ್ರ ಸುಳಿವೇ ಇಲ್ಲ!

ಒಂಬತ್ತು ಗಂಟೆಗೆ ಯುವಕರ ಒಂದು ತಂಡ ಮೇನ್ ರೋಡಿಗೆ ಹೊಂದಿಕೊಂಡ ತಿರುವಿನ ಗುಂಟ ಹೋದರು. ತುಸು ದೂರದ ಮೋರಿಯ ಪಕ್ಕದಲ್ಲಿ ಮೇಷ್ಟರು ಮಕಾಡೆ ಮಲಗಿದ್ದರು! 'ಅಯ್ಯೋ! ಇಲ್ನೋಡಿ. ಮೇಷ್ಟ್ರು!' ಅಂತ ಒಬ್ಬ ಕೂಗಿಕೊಂಡ. ಎಲ್ಲರೂ ಅತ್ತ ಓಡಿದರು. ಅವರನ್ನು ಅಂಗಾತ ಮಲಗಿಸಿ ಉಸಿರನ್ನು ಪರೀಕ್ಷಿಸಿದರು. 'ಜೀವ ಇದ್ದ ಹಾಗಿದೆ' ಅಂದ ಒಬ್ಬ. ತಕ್ಷಣ ಅವರನ್ನು ಮನೆಗೆ ಸಾಗಿಸಿದರು. ರಾತ್ರಿ ಹತ್ತು ಗಂಟೆಯಾಗಿತ್ತು. ಸರಕಾರೀ ಆಸ್ಪತ್ರೆಯ ಡಾಕ್ಟರು ಉಳಿದ ಅಧಿಕಾರಿಗಳ ಹಾಗೆ ತಾಲ್ಲೂಕಾಸ್ಥಳಕ್ಕೆ ಹೋಗಿದ್ದರು. ಊರ ಹಿರಿಯೊಬ್ಬರು ಹಳ್ಳಿಯ ಚಿಕಿತ್ಸೆ ಪ್ರಾರಂಭಿಸಿದರು. ಯಾರೋ ಅಂದರು, 'ಇದು ಕಚಡಾ ನನ್ನ ಮಗ ಚೇರ್ಮನ್ನನ ಕಡೆಯವರದ್ದೇ ಕೆಲಸ'. ರಾತ್ರಿ ಯಾರೂ ನಿದ್ದೆ ಮಾಡಲಿಲ್ಲ. ಮಾರನೆಯ ದಿನ ಮೇಷ್ಟ್ರನ್ನು ತಾಲ್ಲೂಕಾ ಸ್ಥಳದ ಸರಕಾರೀ ಆಸ್ಪತ್ರೆಗೆ ಸಾಗಿಸಿದರು.

ಶಂಕ್ರಪ್ಪ ಮತ್ತು ಮತ್ತಿಬ್ಬರು ಸೇರಿ ಪೊಲೀಸ್ ಇಲಾಖೆಗೆ ದೂರು ನೀಡಿದರು. ಎರಡು ದಿನಗಳ ಕಾಲ ಊರು ಗರ ಬಡಿದವರಂತಿತ್ತು. ಪೊಲೀಸ್ ಅಧಿಕಾರಿಗಳು ಊರಲ್ಲಿ ವಿಚಾರಣೆ ಪ್ರಾರಂಭಿಸಿದರು. ಅದೊಂದು ದಿನ ಪೊಲೀಸ್ ಸಬ್‌ಇನ್‌ಸ್ಪೆಕ್ಟರ್ ಅವರ ಜೀಪು ಚೇರ್ಮನ್ನರ ಮನೆಯ ಎದುರಿಗೆ ನಿಂತಿತು.

## ಮೋಹನ ಹಬ್ಬು

ನಿವೃತ್ತ ಅಧ್ಯಾಪಕರಾಗಿರುವ ಲೇಖಕರು ಎರಡು ದಶಕಗಳಲ್ಲಿ ಕತೆ, ಕವಿತೆ, ನಾಟಕ, ವಿಮರ್ಶೆ, ಅನುವಾದ, ಸಂಪಾದನೆ ಸೇರಿದಂತೆ ಇಪ್ಪತ್ತೈದು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಹಲವು ಸಂಘ–ಸಂಸ್ಥೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಅವರಿಗೆ 'ಪ್ರಜಾವಾಣಿ' ಕಥಾಸ್ಪರ್ಧೆಯ ಬಹುಮಾನ ಸಂದಿದೆ. ಪ್ರಸ್ತುತ ಉತ್ತರ ಕನ್ನಡ ಜಿಲ್ಲೆಯ ಅಂಕೋಲೆಯಲ್ಲಿ ನೆಲೆಸಿದ್ದಾರೆ.